DAVANGERE SUGAR
COMPANY LIMITED
CIN: L10721KA1970PLC001949

September 09, 2026

To,

BSE Limited
1st Floor, New Trading Ring,
Rotunda bldg., P.J. Towers,
Dalal Street, Mumbai- 400001
Scrip Code: 543267

National Stock Exchange of India
Exchange Plaza,
Bandra Kurla Complex,
Bandra (East), Mumbai -400051
NSE Symbol: DAVANGERE

Subject: Intimation regarding Publication of Corrigendum to the Notice of Annual General Meeting dated August 14, 2026.

Dear Sir/Madam,

This is with reference to the Notice of the Annual General Meeting ("AGM") dated August 14, 2026, which was duly dispatched to the shareholders of the Company through electronic mode on August 20, 2026.

In this regard, we wish to inform you that the Corrigendum to the Notice of the AGM has been published in the newspapers on September 08, 2026, for informing the shareholders and other stakeholders regarding the weblink to the Company's website where the copies of the PCS Certificate and the Valuation Report issued by the Independent Registered Valuer, valuing the Equity Shares and Fully Convertible Warrants in accordance with Regulation 164(1) and Regulation 166A of the SEBI (Issue of Capital and Disclosure Requirements) Regulations, 2018, are available for their perusal and information.

The Corrigendum has been published in the following newspapers:

1. The New Indian Express (English)
2. Vijay Karnataka (Kannada)

The Corrigendum is also available on the website of the Company at https://davangeresugar.com/

Except as specifically mentioned in the Corrigendum, all other terms and contents of the Notice of the AGM shall remain unchanged.

We request you to take the above information on record.

Thanking you,

For Davangere Sugar Company Limited

GANESH SHIVASHANKARAPPA SHAMANUR
Digitally signed by GANESH SHIVASHANKARAPPA SHAMANUR
Date: 2026.09.09 21:16:10 +05'30'

S.S.Ganesh
Managing Director
DIN: 00451383

Encl.: As above

Factory & Admin Office: Kukkuwada – 577 525. Davangere Taluk & District. Karnataka State. INDIA
Phone PBX : 08192 201623,24,25,26,28,29 Accounts Direct : 08192-201789 Fax No: 08192 201627
email : davangeresugars@gmail.com, accounts@ davangeresugars@gmail.com, material.dscl@gmail.com
Website : www.davangeresugars.com
Regd. Office : 73/1,P.B.No. 312, Shamanuru Road, Davangere – 577 004. Karnataka State. INDIA
Corporate Office : No. 19, Shivashankar Plaza, 3rd Floor, Richmond Circle, Lalbagh Road, Bangalore – 560 027, Karnataka State. INDIA
Phone : 080-22272183 Fax : 080-22222779

Writer MR Dattatri inaugurates the 6th Taluk Kannada Literary onference in Chikkamagaluru on Sunday | EXPRESS

Youth must lead Kannada's revival: Dattatri

EXPRESS NEWS SERVICE
@ Chikkamagaluru

BENGALURU writer M.R. Dattatri has stressed the need for youngsters to take the lead in carrying forward the chariot of Kannada and revitalising Kannada literature.

Inaugurating the 6th Taluk Kannada Literary Conference, he lamented that the very survival of the Kannada language and its rich literary tradition has become a matter of concern. He urged people to take a pledge to attract the younger generation towards the growth and development of Kannada.

Dattatri observed that today's youth are generally reluctant to attend literary conferences. "An atmosphere must be created to encourage them to participate in large numbers. Only then will such conferences gain real significance," he pointed out. He mentioned the fact that a lack of interest in Kannada has adversely affected youngsters' command over both Kannada and English. "Many youths are unable to read literary works, let alone write books. In recent times, some of India's finest literary works have emerged in regional languages rather than English, as English is not our social language in the truest sense," he added. MLA H.D. Thammaiah said a strong political movement is needed to protect Kannada from the growing influence of English. He called upon people across party lines to join hands in safeguarding the language. MLC C.T. Ravi also spoke on the occasion. Seer Sri Basava Marulasiddha Swamiji appealed to Kannada speakers to use the language carefully and avoid errors.

Conference president B. Thipperudrappa presided over the function. District and taluk Kannada Sahitya Parishat office-bearers were present. Earlier, the conference president was taken in a grand procession to the venue.

Law & order, communal harmony top agenda ahead of Ganeshotsav

EXPRESS NEWS SERVICE
@ Shivamogga

MLA S. N. Channabasappa said the district administration would take the necessary measures from time to time to maintain law and order, while also ensuring communal harmony in the city in view of the Ganesha Festival scheduled for 14 September.

Participating in a peace committee meeting organised here recently, MLA S. N. Channabasappa stressed the need to provide a concession in the fees collected through the Single Window system for granting permission to organisers to install Ganesha idols in the city. He also suggested that the fees for erecting flex banners during the festival should be waived. He said the district authorities should take decisions in a timely manner.

Demanding that the district administration ensure uninterrupted power supply during the festival, the MLA requested that no additional charges be levied for electricity.

Presiding over the Peace Committee meeting, Deputy Commissioner (DC) Prabhuling Kavalikatti said that three Single Window Centres had been established at New Mandli, the Railway Station and the MESCOM office in Gopala Extension to facilitate permissions for organising committees to install Ganesha idols in public places. The required manpower would be deployed at these centres. Responding to requests from the public, he said certain relaxations would be considered, and a decision regarding permission to erect flex banners would be notified after due consultation.

Requesting the public to cooperate with the district administration in maintaining law and order and communal harmony in the city, the DC said that the representations received from the public would be addressed after review.

IDOL IMMERSION SPOTS:

THE district administration has identified 20 immersion locations, including mobile immersion units. At open water bodies such as canals and rivers, the services of trained divers would be utilised, while boats and adequate lighting facilities had been arranged, said Mayanna Gowda, Commissioner of the City Corporation.

Speaking on the occasion, Superintendent of Police B. Nikhil said the district police acted as a bridge between the district administration and the public to ensure harmony during the festival.

He advised Ganesha idol committees to make use of local artistes and dance troupes instead of DJ music systems. This would not only provide opportunities for local artists to showcase their talent but would also help curb noise pollution, he said.

He further stressed that organisers should not pay heed to rumours and should contact the police before treating any issue as serious.

Participant Dheerraj Honnavile said that even minor issues could escalate into serious matters during the festival period. He urged the authorities to maintain a strict vigil on miscreants and monitor social media platforms that could disrupt communal harmony. He also called for a strong CCTV surveillance network in sensitive areas of the city.

EXPRESS READ

Newborn found abandoned on road in Udupi, dies later

UDUPI: A newborn that was found abandoned on a road near a house with injuries and rescued on Monday morning died in the hospital in Udupi. Suraksha, an official at the district child protection unit in Udupi, said that the male baby seemed to be just a day old and had injuries on the mouth and was bleeding when locals first found him on Monday at around 6.30 am at a place called Hoode in Malpe police station limits. The locals immediately informed the police and concerned authorities and shifted him to a nearby hospital. Doctors examined the baby and initially it was breathing, but later succumbed at the hospital. The body has been shifted to a private hospital for post-mortem. ENS

ಭದ್ರಾ ಜಲಾಶಯ ನೀರಿನ ಮಟ್ಟ

ಇಂದಿನ ಮಟ್ಟ	178'8.5 ಅಡಿ
ಒಳಹರಿವು	2980 ಕ್ಯೂಸೆಕ್
ಹೊರಹರಿವು	2413 ಕ್ಯೂಸೆಕ್
ಕಳೆದ ವರ್ಷ	184'5 ಅಡಿ

ತುಂಗಾ ಜಲಾಶಯ

ಇಂದಿನ ಮಟ್ಟ	588.21 ಮೀ.
ಒಳಹರಿವು	4294 ಕ್ಯೂಸೆಕ್
ಹೊರಹರಿವು	4491 ಕ್ಯೂಸೆಕ್
ಕಳೆದ ವರ್ಷ	588.21 ಮೀ.

ಚೂರು ಪಾರು

ಪತ್ರಿಕಾ ದಿನಾಚರಣೆ ಇಂದು

ದಾವಣಗೆರೆ: ಹರಿಹರ ತಾಲೂಕು ಮಲೇಬೆನ್ನೂರು ಸಮೀಪದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಸೆ.8ರಂದು ಬೆಳಗ್ಗೆ 11 ಗಂಟೆಗೆ ಹರಿಹರ ತಾಲೂಕು ಮಟ್ಟದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಹರಿಹರ ತಾಲೂಕು ಘಟಕದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಗಣಿತ: ಸುಹಾಶ್ರೀಗೆ ಗೌರವ

ದಾವಣಗೆರೆ: ಚಿತ್ರದುರ್ಗದ ಶ್ರೀರಾಮ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ಗ್ಯಾಲಕ್ಸಿ ಎಜು ಇನೋವೇಷನ್ ಏರ್ಪಡಿಸಿದ್ದ 8ನೇ ರಾಜ್ಯ ಮಟ್ಟದ ಅಬಾಕಸ್ ಮತ್ತು ಮಾನಸಿಕ ಗಣಿತ ಸ್ಪರ್ಧೆ-2026 ರಲ್ಲಿ ದಾವಣಗೆರೆಯ ಎಸ್.ಜಿ.ಕೆ. ಅಬಾಕಸ್ ಕೇಂದ್ರದ ಸುಹಾಶ್ರೀ.ಜಿ ವೈದಿಕ ಗಣಿತ ವಿಭಾಗದಲ್ಲಿ 'ರನ್ನರ್ ಅಪ್-1' ಸ್ಥಾನ ಪಡೆದಿದ್ದಾರೆ. ಇದೇ ಸ್ಪರ್ಧೆಯಲ್ಲಿ ನಗರದ ಎಸ್.ಜಿ.ಕೆ. ಅಬಾಕಸ್ ಕೇಂದ್ರದ ತನುಶ್ರೀ ಜಿ ಅವರು ಬಿ ಗ್ರೂಪ್ ವಿಭಾಗ ದಲ್ಲಿ ರನ್ನರ್ ಅಪ್-3 ಸ್ಥಾನ ಪಡೆದಿದ್ದಾರೆ.

ಚನ್ನಗಿರಿ ತಾಲೂಕು ಹಿರೇಮಳಲಿ ಗ್ರಾಮ ವ್ಯಾಪ್ತಿಯ ಹಸ್ತಾಂತರಿಸಿದ್ದ 1000 ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದ್ದು, ಒಂದೇ ಗ್ರಾಮ ಪಂಚಾಯಿತಿ ಸದಸ್ಯರ ಸೀಟು ಇದೆ. ಜನಸಂಖ್ಯೆ ಆಧಾರದಲ್ಲಿ ಗ್ರಾಮಕ್ಕೆ ಒಂದು ಹೆಚ್ಚುವರಿ ಸದಸ್ಯ ಸೀಟು ನೀಡಬೇಕು ಎಂದು ಹಿರೇಮಳಲಿ ಗ್ರಾಮದ ಮಾಜಿ ಸದಸ್ಯ ಕೃಷ್ಣಮೂರ್ತಿ, ಗ್ರಾಮಸ್ಥರಾದ ಬಾಂದ್ರಾನಿ, ಯೋಗೀಶಪ್ಪ ಇತರರು ದಾವಣಗೆರೆಯಲ್ಲಿ ಸೋಮವಾರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಏಕದಂತನ ಮೂರ್ತಿಗಳಿಗೆ ಅಂತಿಮ ರೂಪ | ಆರು ಜಿಲ್ಲೆಗಳಿಗೆ ಪೂರೈಕೆ

ಕಣ್ಮನ ಸೆಳೆಯುವ ಗಣೇಶ ಮೂರ್ತಿ

■ **ಎಂ.ಎಸ್. ಶಾಸ್ತ್ರೀಹೊಳೆಮಠ್** ನ್ಯಾಮತಿ
dvgeditor@gmail.com

ಗೌರಿ-ಗಣೇಶ ಹಬ್ಬಕ್ಕೆ ದಿನಗಣನೆ ಶುರುವಾಗಿದ್ದು, ವಿಘ್ನ ನಿವಾರಕ ಗಣೇಶನ ಮೂರ್ತಿಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ನ್ಯಾಮತಿ, ಹೊನ್ನಾಳಿ, ಸಾಸ್ವೆಹಳ್ಳಿ, ಕುರುವ ಗ್ರಾಮ ಸೇರಿ ಕುಂಬಾರ ಬೀದಿಗಳಲ್ಲಿ ಮಣ್ಣಿನಿಂದ ಮಾಡಿದ ವೈವಿಧ್ಯಮಯ ಗಣೇಶ ಮೂರ್ತಿಗಳು ಕಣ್ಮನ ಸೆಳೆಯುತ್ತಿವೆ.

ಸೆಪ್ಟೆಂಬರ್ 14ರ ಸೋಮವಾರ ಗಣೇಶ ಚತುರ್ಥಿ ಇದೆ. ಅವಳಿ ತಾಲೂಕಾದ್ಯಂತ ರಸ್ತೆ ಬದಿ, ಬಡಾವಣೆಗಳಲ್ಲಿ ಗಣೇಶೋತ್ಸವ ಸಿದ್ಧತೆಗಳು ಸಾಗಿವೆ. ಕುಂಬಾರರು ಸುಮಾರು ನಾಲ್ಕೈದು ತಲೆಮಾರುಗಳಿಂದ ಗಣೇಶ ಮೂರ್ತಿ ತಯಾರಿಕೆ ಮಾಡಿಕೊಂಡು ಬರುತ್ತಿದ್ದಾರೆ. ಮೊದಲಿನಿಂದಲೂ ಜೇಡಿ ಮಣ್ಣು ಬಳಸಿ ಮೂರ್ತಿ ತಯಾರಿಸುತ್ತಿದ್ದಾರೆ. ದೇವತಾರಾಧನೆಗೆ ಕಲ್ಲು, ಲೋಹ ಬಳಕೆ ಬಿಟ್ಟರೆ ನಂತರದ ಸ್ಥಾನ ಮಣ್ಣಿಗೆ. ಅವಳಿ ತಾಲೂಕಿನಲ್ಲಿ ನೈಸರ್ಗಿಕವಾಗಿ ಸಿಗುವ 19 ರೀತಿಯ ಮಣ್ಣಿನಿಂದ ಗಣಪತಿ ಮೂರ್ತಿ ಜೀವ ತಾಳಿ, ಭಕ್ತರ ಮನೆಗೆ ಆಗಮಿಸುತ್ತಾನೆ.

ಗಣಪತಿ ಉತ್ಸವ ಸಮಿತಿಗಳ ಬೇಡಿಕೆಗೆ ಅನುಗುಣವಾಗಿ ಕುಂಬಾರ ಬೀದಿಯ ಕುಟುಂಬಗಳು ಇಂದಿಗೂ ಮಣ್ಣಿನ ಗಣಪತಿ ತಯಾರಿಸುತ್ತಾರೆ. ಇಲ್ಲಿ ಸಿದ್ಧವಾಗುವ ಮೂರ್ತಿಗಳು ಎರಡು ತಾಲೂಕಿಗೆ ಸೀಮಿತವಾಗದೆ, ದಾವಣಗೆರೆ, ಶಿವಮೊಗ್ಗ, ಹಾವೇರಿ, ಹುಬ್ಬಳ್ಳಿ, ಬೆಂಗಳೂರು, ತುಮಕೂರು ಸೇರಿ ನಾನಾ ಭಾಗಗಳಿಗೆ ಹೋಗುತ್ತವೆ.

'ಶಿವ ಗಣೇಶ, ದರ್ಬಾರ್ ಗಣೇಶ, ವಿದ್ಯಾ ಗಣಪತಿ, ಮೂಷಿಕ ವಾಹನಾರೂಢ ಗಣೇಶ, ಬಲಮುರಿ ಮೂರ್ತಿ, ಎಡಮುರಿ, ಕೃಷ್ಣ ಗಣೇಶ, ಚಂದ್ರ ಗಣೇಶ, ಅಂಗೈ ಗಣಪ, ಸಿಂಹಾಸನಾರೂಢ ಗಣೇಶ, ಪಂಚ ಅಶ್ವಾರೂಢ ಗಣೇಶ ಸೇರಿ ಹಲವಾರು ಬಗೆಯ ಗಣೇಶ ಮೂರ್ತಿಗಳು ಸಿದ್ಧಗೊಂಡಿವೆ. ಗಣೇಶ ಮೂರ್ತಿಗಳ ಮುಂಗಡ ಬುಕಿಂಗ್ ಜೋರಾಗಿದೆ,' ಎನ್ನುತ್ತಾರೆ ನ್ಯಾಮತಿಯ ಹೊಸಮನೆ ಚನ್ನೇಶ್ ಕುಂಬಾರ್.

'ನಮ್ಮ ಕುಲ ಕಸುಬು ಮಡಿಕೆ ತಯಾರಿಸುವುದು. ಜತೆಗೆ ಪ್ರತಿ ವರ್ಷ ಚೌತಿ ಸಮಯದಲ್ಲಿ ಗಣೇಶ ಮೂರ್ತಿಗಳನ್ನು ತಯಾರಿಸಿ ಮಾರಾಟ ಮಾಡುತ್ತೇವೆ. ಇಡೀ ಕುಟುಂಬ ಈ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತದೆ. ಈ ಬಾರಿ ವೈವಿಧ್ಯಮಯ ಗಣೇಶ ಮೂರ್ತಿಗಳನ್ನು ತಯಾರಿಸಿದ್ದೇವೆ' ಎನ್ನುತ್ತಾರೆ

ಹೊನ್ನಾಳಿ ಪಟ್ಟಣದ ಕುಂಬಾರ ಬೀದಿಯಲ್ಲಿ ಗಣೇಶನ ಮೂರ್ತಿಗಳಿಗೆ ಅಂತಿಮ ರೂಪ ನೀಡುತ್ತಿರುವುದು.

ಗ್ರಾಹಕರು ಇಂಥದ್ದೇ ಗಣೇಶ ಬೇಕೆಂದು ಹೇಳಿ ಮಾಡಿಸುತ್ತಾರೆ. ಇನ್ನು ಕೆಲ ಗ್ರಾಹಕರು ಮನೆಗೆ ಬಂದು ತಮಗಿಷ್ಟವಾದ ಮೂರ್ತಿ ಆಯ್ಕೆ ಮಾಡಿ, ಮುಂಗಡ ಹಣ ಕೊಟ್ಟು ಹೋಗುತ್ತಾರೆ. ಗಣೇಶ ಮಂಡಳಿಯವರು ದೊಡ್ಡ ಮೂರ್ತಿಯನ್ನು ಹೆಚ್ಚು ಆಯ್ಕೆ ಮಾಡುತ್ತಾರೆ.
- ದೊಡ್ಡನೆ ಗಿರೀಶ್ ಕುಂಬಾರ ನ್ಯಾಮತಿ.

ವರ್ಷದಿಂದ ವರ್ಷಕ್ಕೆ ಮಣ್ಣಿನಿಂದ ಹಿಡಿದು ಪ್ರತಿಯೊಂದು ಸಾಮಗ್ರಿ ಬೆಲೆ ದುಬಾರಿಯಾಗಿದೆ. ಗಣೇಶನ ಮೂರ್ತಿಗಳನ್ನು ಈಗಾಗಲೇ ಸಿದ್ಧ ಪಡಿಸಿದ್ದು, ಮೂರ್ತಿಗಳ ಗಾತ್ರಕ್ಕೆ ಅನುಗುಣವಾಗಿ ಬೆಲೆ ನಿಗದಿ ಮಾಡಿದ್ದೇವೆ.
- ಕುಮಾರ್ ಕುಂಬಾರ.

ಹೊನ್ನಾಳಿಯ ಜಯಪ್ಪರ ಬಸವರಾಜ್ ಕುಂಬಾರ ಮತ್ತು ನಾಗರಾಜ್ ಕುಂಬಾರ.

ಬೆಲೆ 250 ರೂ.ನಿಂದ ಆರಂಭ

ಒಂದು ದಿನದ ವ್ಯಾಪಾರಕ್ಕೆ ಐದು ತಿಂಗಳ ಶ್ರಮ ಬೇಕಾಗುತ್ತದೆ. ಯುಗಾದಿ ಪಾಡ್ಯಕ್ಕೆ ಮಣ್ಣು ತಂದು ಹದ ಮಾಡಿ ಬಸವ ಜಯಂತಿಯಂದು ಬೇರೆ ಬೇರೆ ವಿನ್ಯಾಸದ ಮೂರ್ತಿಗಳನ್ನು ತಯಾರಿಸ ಲಾಗುತ್ತದೆ. ಗಣೇಶ ತಯಾರಿಕೆಗೆ ಅಗತ್ಯವಿರುವ ಮಣ್ಣು ತರಲು ಅರಣ್ಯಕ್ಕೆ ಹೋದರೆ ಅರಣ್ಯ ಇಲಾಖೆಯವರ, ಹೊಲಗಳಿಗೆ ಹೋದರೆ ರೈತರ ಆಕ್ಷೇಪ ಎದುರಿಸಬೇಕು. ಗಣೇಶ ಮೂರ್ತಿಗಳ ಬೆಲೆ 250ರಿಂದ ಆರಂಭವಾಗಿ ಮೂರ್ತಿಗಳ ಎತ್ತರಕ್ಕೆ ಅನುಗುಣವಾಗಿ ಸಾವಿರಾರು ರೂ. ನಿಗದಿ ಮಾಡಲಾಗಿದೆ. ಕೆರೆಗಳಿಂದ ತಂದ ಜೇಡಿ ಮಣ್ಣಿಗೆ ನೀರು ಬೆರೆಸಿ ಹದವಾಗುವವರೆಗೆ ಮಿದ್ದಿದ ನಂತರ ಭತ್ತದ ಹುಲ್ಲು, ಗೋಣಿ ಚೀಲ ಬಳಸಿ ಜೇಡಿ ಮಣ್ಣಿಗೆ ಗಣಪನ ಆಕಾರ ನೀಡಿದ ಬಳಿಕ ನೈಸರ್ಗಿಕ ಬಣ್ಣಗಳನ್ನು ಹಚ್ಚಲಾಗುತ್ತದೆ. ಈ ಕಾರ್ಯಕ್ಕೆ ಕಲಾವಿದರ ಕುಟುಂಬಗಳು ಸಾಕಷ್ಟು ಬೆವರು ಹರಿಸುತ್ತಾರೆ. ಕುಂಬಾರ ಕಲಾವಿದರು ತಮ್ಮ ಮನೆಗಳಲ್ಲೇ ಮೂರ್ತಿ ಸಿದ್ಧಪಡಿಸಿ, ಅಲ್ಲೇ ಮಾರುತ್ತಾರೆ.

ವಿಕ - ಚಿತ್ರ ಸುದ್ದಿ

ದಾವಣಗೆರೆಯ ತಾಲೂಕಿನ ಎಲೆಬೇತೂರು ಗ್ರಾಮದಲ್ಲಿ ಇತ್ತೀಚೆಗೆ ನಡೆದ ನವೀಕೃತ ಪುರಾತನ ಶ್ರೀ ಕಲ್ಲೇಶ್ವರಸ್ವಾಮಿ ದೇವಸ್ಥಾನದ ಉದ್ಘಾಟನೆ ಹಾಗೂ ಕಳಸಾರೋಹಣ ಸಮಾರಂಭವನ್ನು ಹಾಲೋಮಟ್ಟಿ ವಿರಕ್ತಮಠದ ಶ್ರೀ ಗುರುಬಸವ ಸ್ವಾಮೀಜಿ ಉದ್ಘಾಟಿಸಿದರು.

ದಾವಣಗೆರೆಯ ಶ್ರೀ ಚಿಕ್ಕೇಶ್ವರ ಪ್ರೌಢಶಾಲೆಯಲ್ಲಿ ಶನಿವಾರ ಮಕ್ಕಳ ಸಾಹಿತ್ಯ ಪರಿಷತ್ ದಾವಣಗೆರೆ ದಕ್ಷಿಣ ವಿಭಾಗದಿಂದ ಶಿಕ್ಷಕರ ದಿನಾಚರಣೆ ನಡೆಯಿತು. ಶಿವನಹಳ್ಳಿ ರಮೇಶ್, ಪರಿಷತ್ ಅಧ್ಯಕ್ಷ ರವಿಕುಮಾರ್, ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಒಡೇನಪುರ, ಮಂಗಳಗೌರಮ್ಮ ಇದ್ದರು.

ದಾವಣಗೆರೆಯ ಕೆ.ಬಿ. ಬಡಾವಣೆಯಲ್ಲಿರುವ ಬಳ್ಳಾರಿ ಸಿದ್ದಮ್ಮನವರ ಮೊಮ್ಮಗ ಚಿತ್ರಿಕಿ ಶಿವಕುಮಾರ್ ಮನೆಯಲ್ಲಿ ನಡೆದ ಮಹಾಮನೆ ಕಾರ್ಯಕ್ರಮದಲ್ಲಿ ಭದ್ರಾವತಿಯ ವಿಜಯರಾಜಣ್ಣ 'ಗುರುವಿನ ಮಹತ್ವ' ಕುರಿತು ಉಪನ್ಯಾಸ ನೀಡಿದರು. ಈ ವೇಳೆ ವೀರಣ್ಣ ಶಿವಸಾಲಿ, ಚಿತ್ರಿಕಿ ಶಿವಕುಮಾರ್, ಶಿವಾನಂದ ಗುರೂಜಿ, ಭುವನೇಶ್ವರಿ, ಚಿತ್ರಿಕಿ ಪುಷ್ಪಾವೀಣಾ ಮಂಜುನಾಥ್, ಚಂದ್ರಶೇಖರ್ ಆರೂಢಿ, ತಿಪ್ಪೆರುದ್ರೇಶ್ ಅಂಗಡಿ, ವಿ.ಟಿ. ಮಂಜುನಾಥ್, ವಿಭೂತಿ ಬಸವಾನಂದ ಇದ್ದರು.

ಇಷ್ಟಲಿಂಗ ಧರಿಸಿ, ಬಸವತತ್ವ ಅನುಸರಿಸಿ

ಚನ್ನಗಿರಿ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಶ್ರಾವಣ ಬಂತು ಅನುಭಾವ ತಂತು ಕಾರ್ಯಕ್ರಮವನ್ನು ಡಾ.ಗುರುಬಸವ ಸ್ವಾಮೀಜಿ ಉದ್ಘಾಟಿಸಿದರು.

ಚನ್ನಗಿರಿ: ಇಷ್ಟಲಿಂಗ ಧರಿಸಿ, ಬಸವ ತತ್ವಗಳನ್ನು ಅನುಸರಿಸಿದಾಗ ನಿಜವಾದ ಗೌರವ ದೊರೆಯುತ್ತದೆ ಎಂದು ಪಾಂಡೋಮಟ್ಟಿ ವಿರಕ್ತಮಠದ ಡಾ. ಗುರುಬಸವ ಸ್ವಾಮೀಜಿ ಹೇಳಿದರು.

ಪಟ್ಟಣದ ವೀರಭದ್ರೇಶ್ವರ ಬಡಾವಣೆಯ ಪ್ರಭು ಮನೆಯಂಗಳದಲ್ಲಿ ಜಾಗತಿಕ ಲಿಂಗಾಯತ ಮಹಾ ಸಭಾ ತಾಲೂಕು ಘಟಕದಿಂದ ಶನಿವಾರ ಸಂಜೆ ಏರ್ಪಡಿಸಿದ್ದ 4ನೇ ವರ್ಷದ ಶ್ರಾವಣ ಬಂತು ಅನುಭಾವ ತಂತು ಸಮಾರೋಪ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಅಂದಿನಿಂದ ಇಂದಿನ ವರೆಗೂ ಶರಣರ ತತ್ವಗಳು, ವಿಚಾರಗಳು, ವಚನಗಳು ಇಂದಿಗೂ ಸತ್ಯ, ಸಾರವಾಗಿವೆ ಎಂದು ತಿಳಿಸಿದರು. ಜಾನಪದ ಕಲಾವಿದ ಗಂಜೀಗಟ್ಟೆ ಕೃಷ್ಣಮೂರ್ತಿ, ಹಾಸ್ಯ ಕಲಾವಿದ ಜಗನ್ನಾಥ್, ಜಾಗತಿಕ ಲಿಂಗಾಯತ ತಾ.ಘಟಕದ ಅಧ್ಯಕ್ಷ ರಾಜಪ್ಪ, ಮಹಿಳಾ ಘಟಕದ ತಾ.ಅಧ್ಯಕ್ಷೆ ಮಂಜುಳಾ ರಾಜು ಇತರರು ಇದ್ದರು.

ಉಪನಾಯಕನಹಳ್ಳಿ ಮುಖಂಡರು ಕೈ ಸೇರ್ಪಡೆ

ಸಂತೆಬೆನ್ನೂರಿನಲ್ಲಿ ಶಾಸಕ ಬಸವರಾಜು ಶಿವಗಂಗಾ ಸಮ್ಮುಖದಲ್ಲಿ ಉಪನಾಯಕನಹಳ್ಳಿ ಗ್ರಾಮದ ಮುಖಂಡರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದರು.

ಸಂತೆಬೆನ್ನೂರು: ಚನ್ನಗಿರಿ ತಾಲೂಕು ಸಂತೆಬೆನ್ನೂರು ಗ್ರಾಮದ ಶ್ರೀ ಕಂತೇಶ್ವರ ಸಮುದಾಯ ಭವನದಲ್ಲಿ ಶನಿವಾರ ನಡೆದ ಪ್ರಜಾಸೇವಾ ಕಾರ್ಯಕ್ರಮದಲ್ಲಿ ಉಪನಾಯಕನಹಳ್ಳಿ ಗ್ರಾಮದ ಬಿಜೆಪಿ ಮುಖಂಡರು ಶಾಸಕ ಬಸವರಾಜು ಶಿವಗಂಗಾ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು.

ಶಾಸಕರು ಮಾತನಾಡಿ, ನಮ್ಮ ಸರಕಾರದ ಗ್ಯಾರಂಟಿ ಯೋಜನೆ ಹಾಗೂ ಗ್ರಾಮದ ಅಭಿವೃದ್ಧಿಗೆ ಕಾಳಜಿ ವಹಿಸಿರುವುದಕ್ಕೆ ಬೆಂಬಲ ಸೂಚಿಸಿ, ಸ್ವಯಂ ನಿರ್ಧಾರದಿಂದ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಆಗಿರುವುದಕ್ಕೆ ಸ್ವಾಗತಿಸುತ್ತೇನೆ. ಉಪನಾಯಕನಹಳ್ಳಿ ಗ್ರಾಮದ ದೇವಸ್ಥಾನಕ್ಕೆ, ರಸ್ತೆ ಅಭಿವೃದ್ಧಿಗೆ ಅನುದಾನ ಒದಗಿಸುವುದು ಹಾಗೂ ಕಂದಾಯ ಗ್ರಾಮವನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಉಪನಾಯಕನಹಳ್ಳಿ ಗ್ರಾಮದ ಮುಖಂಡ ಶಶಿಕುಮಾರ್, ಕೆ.ಪಿ. ಗಿರೀಶ್, ಶೇರ್‌ಅಲಿ, ಜಬ್ಬರ್, ಮಾರುತಿ, ಉಮೇಶ್, ವಸಂತ್, ಮಾತಪ್ಪ, ನಾಗೇಂದ್ರಪ್ಪ, ನಾಗರಾಜ್, ಕೆಂಚವೀರಪ್ಪ, ಚಂದ್ರಶೇಖರ್, ಶ್ರೀಧರ್, ಕೆಂಚಪ್ಪ, ಗ್ರಾಮಸ್ಥರು ಇದ್ದರು.

20ಕ್ಕೆ ಎಸ್‌ಎಸ್‌ಎಂ ಕಪ್ ಚೆಸ್ ಪಂದ್ಯ

ದಾವಣಗೆರೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಜನ್ಮದಿನದ ಅಂಗವಾಗಿ ದಾವಣಗೆರೆ ಚೆಸ್ ಕ್ಲಬ್ ವತಿಯಿಂದ ಸೆ.20ರಂದು ನಗರದ ಶಾಮನೂರು ರಸ್ತೆಯ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಎಸ್‌ಎಸ್‌ಎಂ ಕಪ್ ರಾಷ್ಟ್ರ ಮಟ್ಟದ ಫಿಡೆ ರೇಟಿಂಗ್ ಓಪನ್ ರಾಪಿಡ್ ಚೆಸ್ ಟೂರ್ನಮೆಂಟ್ ಏರ್ಪಡಿಸಲಾಗಿದೆ ಎಂದು ಕ್ಲಬ್‌ನ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 10 ಗಂಟೆಗೆ ಶಾಸಕ ಸಮರ್ಥ್ ಶಾಮನೂರು ಪಂದ್ಯಾವಳಿ ಉದ್ಘಾಟಿಸಲಿದ್ದಾರೆ. 9 ಸುತ್ತಿನಲ್ಲಿ ನಡೆಯುವ ಟೂರ್ನಿಯು 10+5 ಸಮಯ ನಿಯಂತ್ರಣ ಹೊಂದಿರಲಿದೆ. ಒಟ್ಟು 400ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸುವರು. ಮುಖ್ಯ ವಿಭಾಗದಲ್ಲಿ ಪ್ರಥಮ ಬಹುಮಾನವಾಗಿ 10 ಸಾವಿರ ರೂ., ದ್ವಿತೀಯ 7 ಸಾವಿರ ರೂ., ಹಾಗೂ ತೃತೀಯ 5 ಸಾವಿರ ರೂ. ನೀಡಲಾಗುವುದು. ಒಟ್ಟು 1 ಲಕ್ಷ ರೂ. ನಗದು ಬಹುಮಾನ, 90 ಟ್ರೋಫಿ ಹಾಗೂ 60 ಪದಕಗಳನ್ನು. ಅಲ್ಲದೇ, ಬೆಸ್ಟ್ ದಾವಣಗೆರೆ 20 ಟ್ರೋಫಿ, ಅನ್‌ರೇಟೆಡ್ ಆಟಗಾರರು, ಯುವ ಆಟಗಾರರು, 40 ವರ್ಷ ಮೇಲ್ಪಟ್ಟ ಮಹಿಳೆಯರು ಹಾಗೂ 60 ವರ್ಷ ಮೇಲ್ಪಟ್ಟ ಆಟಗಾರರಿಗೆ ವಿಶೇಷ ಬಹುಮಾನ ವಿತರಿಸಲಾಗುವುದು ಎಂದು ಮಾಹಿತಿ ನೀಡಿದರು. ಕ್ಲಬ್ ಕಾರ್ಯದರ್ಶಿ ಟಿ.ಯುವರಾಜ ಮಾತನಾಡಿ, ಅಂಡರ್-05, ಅಂಡರ್-07, ಅಂಡರ್-09, ಅಂಡರ್-11, ಅಂಡರ್-13, ಅಂಡರ್-15, ಅಂಡರ್-17 ಮತ್ತು ಅಂಡರ್-19 ವಿಭಾಗಗಳಲ್ಲಿಯೂ ಪ್ರತ್ಯೇಕ ಬಹುಮಾನ ಕೊಡಲಾಗುವುದು. ಪಂದ್ಯಾವಳಿಯ ತೀರ್ಪುಗಾರರಾಗಿ ಬಿ.ಎಚ್. ವಸಂತ್ ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಕ್ಲಬ್‌ನ ಶಿವ ಶೆಟ್ಟಿ, ತರುಣ್, ಸತೀಶ್, ಎಲ್.ಎಚ್. ಸಾಗರ್ ಇದ್ದರು.

ಕಡೇ ಶ್ರಾವಣ ಸೋಮವಾರ ವಿಶೇಷ ಪೂಜೆ

ನ್ಯಾಮತಿ: ಶ್ರಾವಣದ ಕೊನೆಯ ಸೋಮವಾರದ ಪ್ರಯುಕ್ತ ಪಟ್ಟಣ ಸೇರಿದಂತೆ ತಾಲೂಕಿನ ನಾನಾ ದೇಗುಲಗಳಲ್ಲಿ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಶ್ರದ್ಧಾ ಭಕ್ತಿಯಿಂದ ನಡೆಯಿತು. ಧಾರ್ಮಿಕ ಪುಣ್ಯ ಕ್ಷೇತ್ರಗಳಲ್ಲಿ ವಿಶೇಷ ಪೂಜಾ ಕಾರ್ಯಗಳು ಅದರಲ್ಲೂ ವಿಶೇಷವಾಗಿ ಶಿವನಿಗೆ ಸಂಬಂಧಪಟ್ಟ ದೇಗುಲಗಳಲ್ಲಿ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ ಜರುಗಿತು. ಪಟ್ಟಣದ ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಗಣೇಶ, ಶ್ರೀ ಬಸವೇಶ್ವರ, ಪಾರ್ವತಿ, ತಾಲೂಕಿನ ಕೊಡತಾಳು ಗ್ರಾಮದ ಬೆಟ್ಟದ ಮೇಲಿರುವ ತುಪ್ಪದಗಿರಿ ಮಲ್ಲಿಕಾರ್ಜುನ ಸ್ವಾಮಿ, ತೀರ್ಥಗಿರಿಯ ತೀರ್ಥರಾಮೇಶ್ವರ, ಶಕ್ತಿ ಗಣಪತಿ, ಕುಂಕುವ, ಕೆಂಚಿಕೊಪ್ಪ ಗ್ರಾಮದ ಬಸವೇಶ್ವರ ಸ್ವಾಮಿ ಶಿಲಾಮೂರ್ತಿಗಳಿಗೆ ವಿಶೇಷ ಪೂಜೆ ಸಲ್ಲಿಸಿ, ಭಕ್ತರು ದೇವರ ದರ್ಶನ ಪಡೆದು ತೀರ್ಥ ಪ್ರಸಾದ ವಿನಿಯೋಗ ಸೇವಿಸಿದರು.

ನಾಗರ ಪಂಚಮಿ ಸಂಭ್ರಮ

ಬಸವಾಪಟ್ಟಣದ ಹರೋಸಾಗರದಲ್ಲಿ ಸೋಮವಾರ ನಾಗರ ಕಲ್ಲಿಗೆ ಹಾಲು-ತುಪ್ಪ ಎರೆದು ಪೂಜೆ ಸಲ್ಲಿಸಿದ ಮಹಿಳೆಯರು ಮತ್ತು ಮಕ್ಕಳು.

ಬಸವಾಪಟ್ಟಣ: ಶ್ರಾವಣ ಮಾಸದ ನಾಗರ ಪಂಚಮಿ ಹಬ್ಬದ ಅಂಗವಾಗಿ ಬಸವಾಪಟ್ಟಣ ಹೋಬಳಿಯಾದ್ಯಂತ ಕಡೇ ಸೋಮವಾರ ನಾಗರ ಕಲ್ಲಿಗೆ ಮಹಿಳೆಯರು ಮತ್ತು ಮಕ್ಕಳು ಹಾಲು-ತುಪ್ಪ ಹಾಕಿ ಶ್ರದ್ಧಾ ಭಕ್ತಿಯಿಂದ ಪೂಜೆ ನೆರವೇರಿಸಿದರು. ನಾಗಪ್ಪನಿಗೆ ನೈವೇದ್ಯಕ್ಕಾಗಿ ಬೇಯಿಸಿದ ಹುರುಳಿ ಕಾಳು, ಜೋಳದ ಹರಳು, ಎಳ್ಳುಂಡೆ, ಅಕ್ಕಿ ಉಂಡಿ, ಕೋಸಂಬರಿ, ಒಣಗಿದ ಕೊಬ್ಬರಿ ಬಟ್ಟಲು, ಪಲ್ಯಗಳನ್ನು ಮಾಡಿ ಭಕ್ತಿ ಸಮರ್ಪಿಸಿದರು.ರೈತರು ತಮ್ಮ ಜಮೀನು, ತೋಟ, ಹೊಲ ಗದ್ದೆಗಳಿಗೆ ಹೋಗಿ ಹಾಲು ತುಪ್ಪ ಹಾಕಿ ಪೂಜೆ ಸಲ್ಲಿಸಿದರು. ಮಕ್ಕಳು ಹೊಸ ಬಟ್ಟೆ ತೊಟ್ಟು ಕೊಬ್ಬರಿ ಬಟ್ಟಲಿಗೆ ದಾರ ಕಟ್ಟಿಕೊಂಡು ತಿರುಗಿಸಿ ಸಂಭ್ರಮಿಸಿದರು.

ರಾಜ್ಯಮಟ್ಟದ ಪ್ರಶಸ್ತಿ | 25 ಲಕ್ಷ ರೂ. ನಗದು ಬಹುಮಾನ

ದಾವಣಗೆರೆಗೆ ಸ್ವಚ್ಛ ವಾಯು ಪ್ರಶಸ್ತಿ

ಬೆಂಗಳೂರು: ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ 'ಸ್ವಚ್ಛ ವಾಯು ದಿವಸ 2026' ಅಂಗವಾಗಿ ಘೋಷಿಸಿರುವ 2025-26ನೇ ಸಾಲಿನ 'ಸ್ವಚ್ಛ ವಾರ್ಡ್ ವಾಯು ಸರ್ವೇಕ್ಷಣ್ 2025' ಮೌಲ್ಯಮಾಪನದಲ್ಲಿ ದಾವಣಗೆರೆ ನಗರ ರಾಜ್ಯಮಟ್ಟದ ಎರಡು ಪ್ರಮುಖ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. ರಾಷ್ಟ್ರೀಯ ಸ್ವಚ್ಛ ವಾಯು ಕಾರ್ಯಕ್ರಮದ (ಎನ್‌ಸಿಎಪಿ) ನಾನ್-ಅಟೈನ್‌ಮೆಂಟ್ ನಗರವಾಗಿರುವ ದಾವಣಗೆರೆ ಜನಸಂಖ್ಯೆ ಆಧಾರಿತ ವರ್ಗೀಕರಣದಡಿ ಅತ್ಯುತ್ತಮ ಸಾಧನೆ ತೋರಿದೆ. ನಗರದ ಎಸ್‌ಎಸ್ ಬಡಾವಣೆ ಬಿ ಬ್ಲಾಕ್ (ಜನಸಂಖ್ಯೆ ವರ್ಗ 2) ಹಾಗೂ ಡಿಸಿಎಂ ಟೌನ್‌ಶಿಪ್ (ಜನಸಂಖ್ಯೆ ವರ್ಗ 3) ಈ ವಿಭಾಗಗಳಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿವೆ. ಗೌರವದೊಂದಿಗೆ ನಗರಕ್ಕೆ ಒಟ್ಟು 25.00 ಲಕ್ಷ ರೂ. ನಗದು ಬಹುಮಾನ ಲಭಿಸಿದೆ. ವಾಯು ಮಾಲಿನ್ಯ ನಿಯಂತ್ರಣ, ಪರಿಸರ ಜಾಗೃತಿ ಹಾಗೂ ನೈರ್ಮಲ್ಯ ನಿರ್ವಹಣೆಯಲ್ಲಿ ಸ್ಥಳೀಯ ನಿವಾಸಿಗಳು ಮತ್ತು ಮಹಾನಗರ ಪಾಲಿಕೆಯ ಸತತ ಪ್ರಯತ್ನಕ್ಕೆ ಈ ಪ್ರಶಸ್ತಿ ಸಾಕ್ಷಿಯಾಗಿದೆ. ಮಹಾನಗರ ಪಾಲಿಕೆ ಅಧಿಕಾರಿಗಳು, ಸ್ಥಳೀಯ ಪ್ರತಿನಿಧಿಗಳು ಹಾಗೂ ದಾವಣಗೆರೆಯ ನಾಗರಿಕರು ತೋರಿದ ಸಹಕಾರ ಮತ್ತು ಶ್ರಮಕ್ಕೆ ಈ ಮೂಲಕ ಕೃತಜ್ಞತೆ ಸಲ್ಲಿಸಲಾಗಿದ್ದು, ಮುಂದಿನ ದಿನಗಳಲ್ಲಿಯೂ ನಗರದ ಗಾಳಿಯ ಗುಣಮಟ್ಟವನ್ನು ಇನ್ನಷ್ಟು ಸುಧಾರಿಸಲು ಬದ್ಧರಾಗಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗಾಳಿಯ ಗುಣಮಟ್ಟ ಸುಧಾರಿಸಲು ಬದ್ಧ

3 ಕಿಮೀ ರಸ್ತೆಗೆ 27 ಕೋಟಿ ರೂ. ಕ್ರಿಯಾಯೋಜನೆ

■ **ವಿಕ ಸುದ್ದಿಲೋಕ** ಚನ್ನಗಿರಿ

ಪಟ್ಟಣದಲ್ಲಿ ಹಾದು ಹೋಗಿರುವ ಸೊಲ್ಲಾಪುರ- ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ರಸ್ತೆ ಸಾಕಷ್ಟು ಹಾಳಾದ ಹಿನ್ನೆಲೆ, ಪಟ್ಟಣದಲ್ಲಿ ಹಾದು ಹೋಗುವ ಶಿವಲಿಂಗೇಶ್ವರ ಸರಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ತರಳಬಾಳು ವೃತ್ತದವರೆಗೆ 3 ಕಿಮೀ ಕಾಂಕ್ರಿಟ್ ರಸ್ತೆ ನಿರ್ಮಾಣಕ್ಕೆ ಅಂದಾಜು 27 ಕೋಟಿ ರೂ. ವೆಚ್ಚದ ಕ್ರಿಯಾಯೋಜನೆ ತಯಾರಿಸಲಾಗಿದೆ ಎಂದು ಶಾಸಕ ಬಸವರಾಜು ಶಿವಗಂಗಾ ಹೇಳಿದರು.

ಚನ್ನಗಿರಿ ಮುಖ್ಯರಸ್ತೆ ಅಭಿವೃದ್ಧಿಗೆ ಯೋಜನೆ

ಪಟ್ಟಣದ ಮುಖ್ಯರಸ್ತೆ ಮತ್ತು ಬೈಪಾಸ್ ರಸ್ತೆಯ ದಿಗ್ಗೇನಹಳ್ಳಿ ಮತ್ತು ಘನತ್ಯಾಜ್ಯ ವಿಲೇವಾರಿ ಘಟಕದ ರಸ್ತೆಗಳಿಗೆ ಸೋಮವಾರ ಭೇಟಿ ನೀಡಿ ಮಾತನಾಡಿದರು. "ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಂಜಿನಿಯರ್‌ಗಳೊಂದಿಗೆ ಚರ್ಚಿಸಿ, ಪರಿಶೀಲನೆ ಸಹ ನಡೆಸಿ ಕ್ರಿಯಾಯೋಜನೆ ಸಿದ್ಧಪಡಿಸಿ ಅನುದಾನಕ್ಕೆ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಪಟ್ಟಣದಲ್ಲಿ ಹಾದು ಹೋಗಿರುವ ರಸ್ತೆ ಕಾಮಗಾರಿ ಶೀಘ್ರವೇ ಆರಂಭಿಸಲಾಗುವುದು'' ಎಂದರು.

"ಬೈಪಾಸ್ ರಸ್ತೆಯ ಕಾಮಗಾರಿ ನಡೆಯುವ ಸಂದರ್ಭದಲ್ಲಿ ಹಿಂದೂ ರುದ್ರಭೂಮಿಗೆ ಮತ್ತು ಪುರಸಭೆಯ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಹೋಗಲು ಸೇತುವೆ ಇಲ್ಲದೇ ಸಾರ್ವಜನಿಕರು ಪ್ರತಿಭಟನೆ ನಡೆಸಿ, ಅದನ್ನು ತಡೆದಿದ್ದರು. ಸುಮಾರು 6 ತಿಂಗಳವರೆಗೂ ಕಾಮಗಾರಿ ಸ್ಥಗಿತವಾಗಿ ಗುತ್ತಿಗೆದಾರರು ಎಲ್ಲಾ ಮಿಷನ್ ಗಳನ್ನು ಕೊಂಡೊಯ್ದಿದ್ದರು. ಈ ಸಮಸ್ಯೆಯನ್ನು ಸಹ ಕೇಂದ್ರದ ಸಚಿವರೊಂದಿಗೆ ಮಾತನಾಡಿ ಸೇತುವೆಯ ನಿರ್ಮಾಣಕ್ಕೆ 3 ಕೋಟಿ ರೂ. ಮಂಜೂರು ಮಾಡಿಸಲಾಗಿದೆ'' ಎಂದು ತಿಳಿಸಿದರು.

ಈ ವೇಳೆ ಚನ್ನಗಿರಿ ಲೋಕೋಪಯೋಗಿ ಎಇಇ ರವಿಕುಮಾರ್, ರಾಷ್ಟ್ರೀಯ ಹೆದ್ದಾರಿ ಕಾರ್ಯಪಾಲಕ ಎಂಜಿನಿಯರ್ ಲೋಕೇಶ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸುರೇಶ್, ಪುರಸಭೆ ಮುಖ್ಯಾಧಿಕಾರಿ ಮಂಜುನಾಥ್, ತಹಸೀಲ್ದಾರ್ ನಾಗರಾಜ್, ಬಿಇಒ ಜಯಪ್ಪ, ಚನ್ನಗಿರಿ ವಲಯಾರಣ್ಯಾಧಿಕಾರಿ ರಾಘವೇಂದ್ರ, ಮಾವಿನಕಟ್ಟೆ ವಲಯಾರಣ್ಯಾಧಿಕಾರಿ ಲಷ್ಕರ್ ನಾಯ್ಕ, ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಅಪಘಾತ ತಡೆಗೆ ಜಂಕ್ಷನ್

"ಬೈಪಾಸ್ ರಸ್ತೆಯಲ್ಲಿ ಚಿತ್ರದುರ್ಗದಿಂದ ನೇರವಾಗಿ ಶಿವಮೊಗ್ಗಕ್ಕೆ ಹೋಗುವಂತಹ ರಸ್ತೆ ಮಾಡಿದ್ದು, ಭದ್ರಾವತಿಗೆ ತೆರಳಲು ರಸ್ತೆಗೆ ಅವಕಾಶ ಕಲ್ಪಿಸಿಲ್ಲ ಮತ್ತು ಬೀರೂರು ರಸ್ತೆಯ ದೊಡ್ಡ ಸರ್ಕಲ್‌ನಲ್ಲಿ, ದಿಗ್ಗೇನಹಳ್ಳಿ ಮುಖ್ಯ ರಸ್ತೆ ಮತ್ತು ಮಲ್ಲಿಗೆರೆಗೆ ಹೋಗುವ ಮುಖ್ಯ ರಸ್ತೆಗಳಿಗೆ ಅಪಘಾತಗಳು ಆಗದಂತೆ ಜಂಕ್ಷನ್ ಮಾಡಲು ರಾಜಕಾಲುವೆಯಿಂದ ಹರಿಯುವ ನೀರು ಸರಾಗವಾಗಿ ಹರಿಯಲು ದೊಡ್ಡ ಚರಂಡಿ ನಿರ್ಮಾಣಕ್ಕೆ ಕ್ರಿಯಾ ಯೋಜನೆ ಮಾಡುವಂತೆ ಎಂಜಿನಿಯರ್‌ಗಳಿಗೆ ತಿಳಿಸಲಾಗಿದೆ'' ಎಂದು ಶಾಸಕ ಬಸವರಾಜು ತಿಳಿಸಿದರು.